**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಜಮಖಂಡಿ**

**ಸಿ.ಸಿ.ನಂ. 140/2025**

**ಡಿ.ಡಬ್ಲೂ-1**

ಹೆಸರು ಃ ಪ್ರಮಿಳಾದೇವಿ ಮಾಳಗಿ

ತಂದೆ ಹೆಸರು ಃ ಮಾರುತಿ

ವಯಸ್ಸು ಃ 59 ವರ್ಷ

ಉದ್ಯೋಗ ಃ ಪ್ರಾಥಮಿಕ ಶಾಲಾ ಶಿಕ್ಷಕಿ ಮಧುರಖಂಡಿ

ವಾಸ ಸ್ಥಳ ಃ ಮಧುರಖಂಡಿ ತಾಃ ಜಮಖಂಡಿ.

ದಿನಾಂಕಃ 10-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ.ವಿ.ಬಿ.ಟಿ ವಕೀಲರಿಂದಃ**

**ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ.**

1.ಫಿರ್ಯಾದಿ ನನಗೆ ಪರಿಚಯವಿಲ್ಲಾ. ಶ್ರೀಮತಿ ಕವಿತಾ ರಾಮದುರ್ಗ ಶಿಕ್ಷಕಿಯವರು ತಾವು ಬಿ.ಸಿ ಮಾಡಿರುವುದಾಗಿ ಆದ್ದರಿಂದ ತಾವು ಕೂಡ ಹಣ ಹಾಕಿ ಎಂದು ಹೇಳಿದ ಮೇರೆಗೆ ನಾನು 5,000/- ರೂಪಾಯಿ ಬಿ.ಸಿ ಯಲ್ಲಿ ಹೂಡಿಕೆ ಮಾಡಿದೆನು. ಆಗ ಸದರಿ ಬಿಸಿಯ ಕರಾರು ಪ್ರಕಾರ ನಮ್ಮ ಸಹಿ ಮಾಡಿದ 10 ಚೆಕ್ಕುಗಳನ್ನು ಕೊಡಬೇಕಾಗಿತ್ತು. ಸದರಿ ಬಿಸಿ 100 ಜನರ 5 ಲಕ್ಷ ರೂಪಾಯಿ ವ್ಯವಹಾರದ ಬಿ.ಸಿ ಯಾಗಿತ್ತು. ಸದರಿ ಬಿಸಿಯಲ್ಲಿ ಕವಿತಾ ರಾಮದುರ್ಗ, ಮಹಾದೇವಿ ಕಲ್ಲಪ್ಪ ರಾಮದುರ್ಗ, ಮಂಜುಳಾ ಬಸವರಾಜ ಯರಗೊಪ್ಪ, ಲಕ್ಷ್ಮಿ ನಾಗರಾಜ ಖರೆ, ಕಾಂಚನಾ ಅರ್ಜುನ ಕಲ್ಯಾಣಿ, ರಾಜೇಶ್ವರಿ ರಾಹುಲ ಬಿಜ್ಜರಗಿ ಮತ್ತು ಸುನಂದಾ ಕಾಮಟೆ ರವರು ಎಲ್ಲರೂ ಸೇರಿ ಬಿಸಿ ನಡೆಸುತ್ತಿದ್ದರು.ಪ್ರತಿ ತಿಂಗಳು ಸದರಿ ಹಣವನ್ನು ನಿಲಾವು ಮೂಲಕ ಹೆಚ್ಚಿಗೆ ಬೇಡಿದವರಿಗೆ ನೀಡಿ ಇನ್ನೂಳಿದ ಹಣ ಎಲ್ಲರೂ ಹಂಚಿಕೊಳ್ಳುತ್ತಿದ್ದರು. ನನ್ನ ಪಾಲಿನ ತಿಂಗಳಿಗೆ ಬರುವ ಕಮೀಷನ ಹಣವನ್ನು ಕೊಡಲಿಲ್ಲ, ಆಗ ನಾನು ಕೇಳಿದಾಗ ಸದರಿ ಕಮೀಶನ ಹಣವನ್ನು ಕೊಡಲಿಲ್ಲ ಹಾಗೂ ನಾನು ಕೇಳಿದ ಚೆಕ್ಕುಗಳನ್ನು ವಾಪಸ ಕೇಳಿದಾಗ ಒಬ್ಬರು ಇನೊಬ್ಬರ ಹೆಸರು ಹೇಳಿ ಅವರ ಬಳಿ ಕೇಳಿ ಪಡೆದುಕೊ ಎಂದು ಸಬುಬೂ ಹೇಳಿದರು.

2. ಒಂದು ತಿಂಗಳ ನಂತರ ಮತ್ತೆ ಹೋಗಿ ಸದರಿ ಚೆಕ್ಕುಗಳನ್ನು ವಾಪಸ್ಸ ಕೊಡುವಂತೆ ಕೇಳಿಕೊಂಡಾಗ ಅದೇ ರೀತಿ ಸಬೂಬು ಹೇಳಿ ನನ್ನ ಚೆಕ್ಕಗಳನ್ನು ವಾಪಸ್ಸ ಕೊಡಲಿಲ್ಲ ಅಲ್ಲದೇ ನನಗೆ ಬಿಸಿ ಹಣವನ್ನು ಕೊಟ್ಟಿರುವುದಿಲ್ಲ. ನನಗೆ ತಿಂಗಳಿಗೆ 95,000/- ಸಂಬಳ ಇದ್ದು ನನ್ನ ಹಿರಿಯ ಮಗನಿಗೆ ತಿಂಗಳಿಗೆ 60,000/- ಸಂಬಳ ಇದ್ದು, ಕಿರಿಯ ಮಗನಿಗೆ ತಿಂಗಳಿಗೆ 15,000/- ಸಾವಿರ ರೂಪಾಯಿ ಆದಾಯ ಇದ್ದು ನನಗೆ ಹಣದ ಅವಶ್ಯಕತೆ ಯಾವತ್ತು ಇರಲಿಲ್ಲ ಮತ್ತು ನಾನು ಯಾವತ್ತು ಫಿರ್ಯಾದಿಯಿಂದ ಹಣ ಪಡೆದಿಲ್ಲ. ಸದರಿ ಬಿಸಿ ಸದಸ್ಯರಲ್ಲಿ ನಾನು ಮರಳಿ ಚೆಕ್ಕುಗಳನ್ನು ಕೇಳಿದಾಗ ಅವರು ಸದರಿ ಚೆಕ್ಕು ಎಲ್ಲಿ ಕಳೆದು ಹೋಗಿವೆ ಹೇಳುತ್ತೇವೆ ನ್ಯಾಯಾಲಯಕ್ಕೆ ಬಾ ಎಂದು ಹೇಳಿದರು.

3. ನನ್ನ ವಿರುದ್ದ ಒಟ್ಟು 6 ಚೆಕ್ಕ ಅಮಾನ್ಯ ಪ್ರಕರಣಗಳಿದ್ದು ಅವುಗಳನ್ನು ಮೂರು ಪ್ರಕರಣಗಳಲ್ಲಿ ನಿರ್ದೋಶಿಯಂದು ಬಿಡುಗಡೆಯಾಗಿವೆ. ಫಿರ್ಯಾದಿ ರೊಟ್ಟಿ ಮಾರಾಟ ಮಾಡುವ ಕೆಲಸ ಮಾಡುತ್ತಾರೆ. ಫಿರ್ಯಾದಿ ನನಗೆ 5 ಲಕ್ಷ ರೂಪಾಯಿ ಸಾಮರ್ಥ್ಯ ಹೊಂದಿರುವುದಿಲ್ಲ. ಫಿರ್ಯಾದಿ ಬಿ.ಪಿ.ಎಲ್ ಕಾರ್ಡ ಹೊಂದಿದ್ದಾರೆ. ಸದರಿ ಬಿಸಿ ಸದಸ್ಯರ ಬಳಿ ಇನ್ನು ನನ್ನ ನಾಲ್ಕು ಚೆಕ್ಕಗಳು ಇವೆ. ಸದರಿ ಬಿಸಿಯಲ್ಲಿ ಹೆಣ್ಣು ಮಕ್ಕಳು ಮಾತ್ರ ಇದ್ದಾರೆ. ನಾನು ನೀಡಿರುವ ಚೆಕ್ಕಗಳನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ದ ಪ್ರಕರಣಗಳನ್ನು ಹೂಡಿದ್ದಾರೆ. ನಾನು ಫಿರ್ಯಾದಿ ಹತ್ತಿರ ಹಣ ಪಡೆದುಕೊಂಡಿಲ್ಲ ಮತ್ತು ಅವರಿಗೆ ಯಾವುದೇ ಚೆಕ್ಕ ನೀಡಿಲ್ಲ ಆದ್ದರಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

4. ಫೇಬ್ರುವರಿ 2024ರ ನನ್ನ ಪೇಸ್ಲಿಪ್ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

5. ಫೇಬ್ರುವರಿ 2025ರ ನನ್ನ ಪೇಸ್ಲಿಪ್ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

6. 2024-2025 ರ ನನ್ನ ಆದಾಯ ತೆರಿಗೆ ಪಾವತಿಯ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

7. 2025-2026 ರ ನನ್ನ ಆದಾಯ ತೆರಿಗೆ ಪಾವತಿಯ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

8. ನನ್ನ ಮಗ ಪವನ ಥಾಲಿರವರ ಮಾರ್ಚ 2025 ರ ಪೇಸ್ಲಿಪ್ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು.

9. ನನ್ನ ಮಗ ಕಾರ್ತಿಕ ಥಾಲಿರವರ ಮಾರ್ಚ-2022 ರ ಪೇಸ್ಲಿಪ್ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

10. ಪಿಸಿ ನಂ.161/2021 ರ ದೂರಿನ ಧೃಡಿಕೃತನಕಲನ್ನು, ಚೆಕ್ಕ, ಮೇಮೋ, ಲೀಗಲ ನೋಟಿಸ, ಅಂಚೆ ರಸೀದಿ, ಅಂಚೆ ಸ್ವಿಕೃತಿ ಸಹಿತ ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-7 ಎಂದು ಗುರುತಿಸಲಾಯಿತು.

11. ಪಿ.ಸಿ ನಂ.28/2024 ರ ದೂರಿನ ಧೃಡಿಕೃತನಕಲನ್ನು, ಚೆಕ್ಕ, ಮೇಮೋ, ಲೀಗಲ ನೋಟಿಸ, ಅಂಚೆ ರಸೀದಿ, ಅಂಚೆ ಸ್ವಿಕೃತಿ ಸಹಿತ ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-8 ಎಂದು ಗುರುತಿಸಲಾಯಿತು.

12. ಪಿಸಿ ನಂ.29/2024 ರ ದೂರಿನ ಧೃಡಿಕೃತನಕಲನ್ನು, ಚೆಕ್ಕ, ಮೇಮೋ, ಲೀಗಲ ನೋಟಿಸ, ಅಂಚೆ ರಸೀದಿ, ಅಂಚೆ ಸ್ವಿಕೃತಿ ಸಹಿತ ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-9 ಎಂದು ಗುರುತಿಸಲಾಯಿತು.

13. ಪಿಸಿ ನಂ.30/2024 ರ ದೂರಿನ ಧೃಡಿಕೃತನಕಲನ್ನು, ಚೆಕ್ಕ, ಮೇಮೋ, ಲೀಗಲ ನೋಟಿಸ, ಅಂಚೆ ರಸೀದಿ, ಅಂಚೆ ಸ್ವಿಕೃತಿ ಸಹಿತ ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-10 ಎಂದು ಗುರುತಿಸಲಾಯಿತು.

14. ಸಿಸಿ ನಂ.101/2024 ರ ದೂರಿನ ಧೃಡಿಕೃತನಕಲನ್ನು, ಚೆಕ್ಕ, ಮೇಮೋ, ಲೀಗಲ ನೋಟಿಸ, ಅಂಚೆ ರಸೀದಿ, ಅಂಚೆ ಸ್ವಿಕೃತಿ ಸಹಿತ ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-11 ಎಂದು ಗುರುತಿಸಲಾಯಿತು.

15. ಸಿಸಿ-ನಂ.1586/2024 ರ ತೀರ್ಪಿನ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-12 ಎಂದು ಗುರುತಿಸಲಾಯಿತು.

16. ಪಿ.ಸಿ ನಂ.28/2024 ರಲ್ಲಿ ಫಿರ್ಯಾದಿ ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-13 ಎಂದು ಗುರುತಿಸಲಾಯಿತು.

17. ಪಿ.ಸಿ ನಂ.1586/2024 ರಲ್ಲಿಯ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-14 ಎಂದು ಗುರುತಿಸಲಾಯಿತು.

18. ಸಿಸಿ-ನಂ.1587/2024 ರ ತೀರ್ಪಿನ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-15 ಎಂದು ಗುರುತಿಸಲಾಯಿತು.

19. ಪಿ.ಸಿ ನಂ.29/2024 ರಲ್ಲಿ ಫಿರ್ಯಾದಿ ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-16 ಎಂದು ಗುರುತಿಸಲಾಯಿತು.

20. ಪಿ.ಸಿ ನಂ.1587/2024 ರಲ್ಲಿಯ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-17 ಎಂದು ಗುರುತಿಸಲಾಯಿತು.

21. ಸಿಸಿ-ನಂ.1588/2024 ರ ತೀರ್ಪಿನ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-18 ಎಂದು ಗುರುತಿಸಲಾಯಿತು.

22. ಪಿ.ಸಿ ನಂ.30/2024 ರಲ್ಲಿ ಫಿರ್ಯಾದಿ ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-19 ಎಂದು ಗುರುತಿಸಲಾಯಿತು.

23. ಪಿ.ಸಿ ನಂ.1588/2024 ರಲ್ಲಿಯ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಪಾಟೀ ಸವಾಲು ಸಹಿತ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-20 ಎಂದು ಗುರುತಿಸಲಾಯಿತು.

24. 03-12-2024 ರಂದು ಶ್ರೀಮತಿ ರಾಜೇಶ್ವರಿ ಬಿಜ್ಜರ್ಗಿರವರಿಗೆ ನಮ್ಮ ವಕೀಲರ ಮೂಲಕ ನೀಡಿರುವ ಪ್ರತ್ಯುತ್ತರ ನೋಟಿಸಿನ ಧೃಡಿಕೃತನಕಲನ್ನು, ಅಂಚೆ ರಸೀದಿ ಮತ್ತು ಅಂಚೆ ಸ್ವಕೃತಿ ಜೊತೆಗೆ ಹಾಜರಪಡಿಸಿದ್ದು ಅದನ್ನು ನಿಡಿ-21 ಎಂದು ಗುರುತಿಸಲಾಯಿತು.

25. ರಾಜೇಶ್ವರಿ ಬಿಜ್ಜರ್ಗಿರವರಿಗೆ ಕಳುಹಿಸಿದ ಪ್ರತ್ಯುತ್ತರ ನೋಟಿಸನ್ನು ತಿರಸ್ಕಾರ ಮಾಡಿರುವ ಅಂಚೆ ಲಕೋಟೆಯ ಧೃಡಿಕೃತನಕಲನ್ನು ಹಾಜರಪಡಿಸಿದ್ದು ಅದನ್ನು ನಿಡಿ-22 ಎಂದು ಗುರುತಿಸಲಾಯಿತು.

(ದೂರುದಾರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಸಾಕ್ಷಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ